## ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ಮೂಡಿಗೆರೆ
## ಸಿ.ಸಿ.1979/2023

| | | |
|---|---|---|
| ಸಾಕ್ಷಿದಾರರ ಹೆಸರು | : ರತ್ನಗೌಡ ಪಾಟೀಲ್ | ಫ್ರಾಸಾ-5 |
| ತಂದೆಯ ಹೆಸರು | : ಶಿವನಗೌಡ | ಚಾಸಾ-10 |
| ವಯಸ್ಸು | : 31 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ಪಿ.ಎಸ್.ಐ | ದಿನಾಂಕಃ13.02.2025. |
| ವಾಸಸ್ಥಳ | : ಬಟ್ಕಳ ರೂರಲ್ ಪೋಲಿಸ್ ಠಾಣೆ. | |

### :ಮುಖ್ಯ ವಿಚಾರಣೆಃ ಪ್ರಾಜ್ಞ್ಯಾಸ.ಸ.ಅ. ರವರಿಂದ:

ನಾನು ದಿ.09.03.2023 ರಿಂದ 30.09.2023 ರವರೆಗೂ ಬಣಕಲ್ ಪೋಲಿಸ್ ಠಾಣೆಯಲ್ಲಿ ಪಿ.ಎಸ್.ಐಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.11.05.2023 ರಂದು ನಾನು ಚಾಸಾ-11 ರವರೊಂದಿಗೆ ರಾತ್ರಿ ಗಸ್ತು ಕರ್ತವ್ಯದಲ್ಲಿ ಇದ್ದಾಗ ಬೆಳಗ್ಗಿನ ಜಾವ 3.30 ಕ್ಕೆ ಮತ್ತಿಕಟ್ಟೆ ಸರ್ಕಲ್ ಬಳಿ NH-73 ರಸ್ತೆಯಲ್ಲಿ ಒಬ್ಬ ವ್ಯಕ್ತಿ ಬಿದ್ದಿರುವುದು ಕಂಡುಬಂದಿದ್ದು ನಾವು ಜೀಪನ್ನು ನಿಲ್ಲಿಸಿ ಸದರಿ ವ್ಯಕ್ತಿಯ ಹತ್ತಿರ ಹೋಗಿ ನೋಡಿದಾಗ ಆತ ಮೃತನಾಗಿದ್ದು ಯಾವುದೋ ವಾಹನದ ಚಾಲಕನು ಆತನಿಗೆ ಡಿಕ್ಕಿ ಪಡಿಸಿಕೊಂಡು ಹೋಗಿರುವ ಕಾರಣ ರಕ್ತಗಾಯವಾಗಿ ಮೃತಪಟ್ಟಿರುವುದು ತಿಳಿಯಿತು. ನಂತರ ಠಾಣೆಗೆ ವಿಚಾರ ತಿಳಿಸಿ ಮೃತನ ಜೇಬನ್ನು ಪರಿಶೀಲಿಸಿದಾಗ ಅವರ ಆಧಾರ್ ಕಾರ್ಡ್ ಮತ್ತು ಪೋಟೋ ದೊರಕಿದ್ದು ಆತ ರಾಯಚೂರಿನ ತೋರಣದಿಣ್ಣೆಯ ಮಂಜುನಾಥ ಎಂದು ತಿಳಿಯಿತು. ಸದರಿರವರ ಸಂಬಂಧಿಕರ ವಿಚಾರವನ್ನು ಹುಡುಕಿದಾಗ ಮೃತರ ತಂಗಿ ಶ್ರೀದೇವಿ ಎನ್ನುವವರ ಪೋನ್ ನಂಬರ್ ಸಿಕ್ಕಿದ್ದು ಸದರಿರವರಿಗೆ ವಾಟ್ಸಾಪ್ ಮೂಲಕ ಮೃತರ ಪೊಟೋವನ್ನು ಕಳುಹಿಸಿದ್ದು ಅವರು ಮೃತರನ್ನು ಗುರುತಿಸಿರುತ್ತಾರೆ. ನಂತರ ಮೃತ ದೇಹವನ್ನು ಮೂಡಿಗೆರೆ ಸರ್ಕಾರಿ ಆಸ್ಪತ್ರೆಯ ಶವಗಾರಕ್ಕೆ ಸಾಗಿಸಿದೆವು. ಮರುದಿನ ಮೃತರ ಸಂಬಂಧಿಕರಾದ ಶ್ರೀಹರಿ ಎನ್ನುವವರು ಠಾಣೆಗೆ ಹಾಜರಾಗಿ ದೂರು ನೀಡಿದ್ದಾರೆ ಎಂದು ನನಗೆ ತಿಳಿಯಿತು. ದಿ.14.05.2023 ರಂದು ಚಾಸಾ-18 ರವರು ಸ್ಥಳ ಪಂಚನಾಮೆಗೆ ಬಂದಾಗ ಚಾಸಾ-6 ರವರು ದಿ.12.05.2023 ರಂದು ಬೆ.3.15 ರ ಸಮಯಕ್ಕೆ ತಾನು ಮನೆಯಿಂದ ಮಸೀದಿಗೆ ಹೋಗುವಾಗ KA-21-C-4813 ಲಾರಿ ಚಾಲಕನು ಅತೀವೇಗವಾಗಿ ವಾಹನ ಚಲಾವಣೆ ಮಾಡಿಕೊಂಡು ಬಂದು ಮೃತ ಮಂಜುನಾಥ ರವರಿಗೆ ಡಿಕ್ಕಿ ಪಡಿಸಿರುವುದಾಗಿ ಚಾಸಾ-18 ರವರ ಸಮಕ್ಷಮ ಹೇಳಿರುತ್ತಾರೆ. ಆ ಸಮಯಕ್ಕೆ ನಾನು ಸಹಾ ಹಾಜರಿದ್ದೆ. ದಿ.14.05.2023 ರಂದು ನಾನು ನನ್ನ ಹೇಳಿಕೆಯನ್ನು ಚಾಸಾ-18 ರವರ ಸಮಕ್ಷಮ ದಾಖಲಿಸಿಕೊಂಡಿರುತ್ತೇನೆ.

### ಪಾಟೀ ಸವಾಲುಃ ಆರೋಪಿ ಪರ ಶ್ರೀ ಕೆ.ಎ.ಎಂ. ವಕೀಲರಿಂದಃ

ಚಾಸಾ-6 ರವರು ಅಪಘಾತದ ಬಗ್ಗೆ ಚಾಸಾ-18 ರವರಿಗೆ ಹೇಳಿದ್ದಾರೆ ಎಂದು ನಾನು ಹೇಳಿದ ವಿಚಾರ ಹಾಗೂ ನಾನು ಚಾಸಾ-18 ರವರ ಸಮಕ್ಷಮ ಹೇಳಿಕೆ ದಾಖಲಿಸಿಕೊಂಡಿದ್ದೇನೆ ಎಂದು ಹೇಳಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ಮೃತರು ಧರಿಸಿದ ಪ್ಯಾಂಟ್ ನ ಬಲಜೇಬಿನಲ್ಲಿ ಪೋಟೋ ಮತ್ತು ಆಧಾರ್ ಕಾರ್ಡ್ ಸಿಕ್ಕಿತ್ತು. ಯಾವ ಮೊಬೈಲ್ ನಂಬರ್ ನಿಂದ ಯಾವ ಮೊಬೈಲ್ ನಂಬರ್ ಉಳ್ಳ

ವಾಟ್ಸಾಪ್ ಗೆ ಪೋಟೋ ಕಳುಹಿಸಿದ್ದೆ ಎಂದು ಈಗ ನನಗೆ ನೆನಪಿಲ್ಲ. ವಾಟ್ಸಾಪ್ ಮೂಲಕ ಪೋಟೋ ಕಳುಹಿಸಿರುವ ಬಗ್ಗೆ ಯಾವುದೇ ದಾಖಲೆ ಹಾಜರುಪಡಿಸಿಲ್ಲ ಎಂದರೆ ತನ್ನಿಂದ ಯಾವುದೇ ದಾಖಲೆ ಕೇಳಿಲ್ಲ ಎಂದು ನುಡಿಯುತ್ತಾರೆ. ಶವವನ್ನು ಸಾಗಿಸುವಾಗ ನಾನು, ಚಾಸಾ-11 ಮತ್ತು ಆಂಬುಲೆನ್ಸ ಡ್ರೈವರ್ ಹಾಜರಿದ್ದೆವು. ನಾನು ಹೇಳಿದಂತೆ ಅಪಘಾತ ಸ್ಥಳಕ್ಕೆ ಹೋಗಿಲ್ಲ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಚಾಸಾ-18 ರವರಿಗೆ ಹೇಳಿಕೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಮೃತ ವ್ಯಕ್ತಿಯ ಮರಣಕ್ಕೂ ಮತ್ತು ಆರೋಪಿಗೂ ಯಾವುದೇ ಸಂಬಂಧ ಇಲ್ಲದೇ ಇದ್ದರು ಚಾಸಾ-1 ಮತ್ತು 8 ರವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆ ಇಲ್ಲ</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ/-

ಸಾಕ್ಷಿ ಸಹಿಃ

C/c ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಮೂಡಿಗೆರೆ.